ಶ್ರೀ ಬಿ. ಬಿ. ನಿಂಗಯ್ಯ.—ಮಾನ್ಯ ಸ್ನೇಹಿತರು ಬಹಳ ಉತ್ತಮವಾದ ಪ್ರಶ್ನೆ ಕೇಳಿದ್ದಾರೆ. ೧೯೮೫-೮೬ರಲ್ಲಿ ೧೬ ಕಾಲೇಜುಗಳನ್ನು. ೮೬-೮೮ರಲ್ಲಿ ೮ಕಾಲೇಜುಗಳನ್ನು ಅಂದರೆ ಒಟ್ಟು ೨೪ ಕಾಲೇಜುಗಳನ್ನು ಪ್ರಾರಂಭಿಸಿದ್ದೀರಿ. ೧೯೮೫-೮೬ರಲ್ಲಿ ನಮ್ಮ ತಾಲ್ಲೂಕಿಗೆ ಒಂದು ಕಾಲೇಜನ್ನು ಸರ್ಕಾರ ಮಂಜೂರ್ಮಾಡಿದ್ದು, ಕಳೆದ ೪ ವರ್ಷಗಳಿಂದ ಕಟ್ಟಡವಿಲ್ಲದೆ ಆ ಕಲಾ ಮತ್ತು ವಾಣಿಜ್ಯ ಕಾಲೇಜನ್ನು ಜೂನಿಯರ್ ಕಾಲೇಜಿನಲ್ಲಿ ಅವರಿಗೆ ತೊಂದರೆ ಕೊಟ್ಟುಕೊಂಡು ನಡೆಸಂತ್ತಿದ್ದೇವೆ. ಪದೇ ಪದೇ ಕೇಳಿದರೂ ಕಟ್ಟಡಕ್ಕೆ ಹಣ ಮಂಜೂರ್ಮಾಡಲಿಲ್ಲ. ಇದನ್ನು ಸಚಿವರು ಯಾವಾಗ ಪರಿಹಾರ ಕೊಡುತ್ತಾರೆಂದು ಕೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಈ ಎಲ್ಲಾ ಪ್ರಸ್ತಾವನೆಗಳು ಸರ್ಕಾರದ ಮುಂದಿವೆ. ಸರ್ಕಾರಕ್ಕೆ ಹಣಕಾಸಿನ ತೊಂದರೆಯಾಗಿದೆ. ೨೪ ಕಾಲೇಜುಗಳಲ್ಲಿ ಕೆಲವಕ್ಕೆ ಕಟ್ಟಡ ಕಟ್ಟಿಸಿಕೊಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ

ಅಧ್ಯಕ್ಷರು.—ವೀರಯ್ಯಸ್ವಾಮಿಯವರ ೧೭೮೭ನೇ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ. ಅವರ ಪ್ರಶ್ನೆಗೆ ಯಾವಾಗ ಉತ್ತರಿಸುತ್ತೀರಿ ಚಂದ್ರಶೇಖರ್‌ರವರೇ ?

ಶ್ರೀ ಎಂ. ಚಂದ್ರಶೇಖರ್.—ಜಿಲ್ಲಾವಾರು ರಸ್ತೆಗಳ ಬಗ್ಗೆ ವಿಪರೀತ ಮಾಹಿತಿ ಕೇಳಿದ್ದಾರೆ. ೩ ವಾರವಾದರೂ ಸಮಯ ಬೇಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ಇಲಾಖೆಯದು ಮೇ ೩೧, ಜೂನ್ ೬ ಮತ್ತು ೧೩ ರಂದು ಇದೆ. ಯಾವಾಗ ಉತ್ತರ ಹೇಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಜೂನ್ ೧೩ ರಂದು ಉತ್ತರಿಸುತ್ತೇನೆ.

ಅಧ್ಯಕ್ಷರು.—ಹಾಜರಿದ್ದ ಸದಸ್ಯರ ಹೆಸರುಗಳನ್ನು ಮಂತ್ರೊಮ್ಮೆ ಕರೆಯಂತ್ತೇನೆ.

(ಶ್ರೀಯುತರುಗಳಾದ ಬಾಬುರೆಡ್ಡಿ ತುಂಗಳ್, ಎ, ಕೃಷ್ಣಪ್ಪ, ಎ. ಬಿ. ದೇಸಾಯಿ, ಕೆ. ಬಿ. ಕೋಳಿವಾಡ, ಶ್ರೀಮತಿ ಸುಮಾವಸಂತ್ ಇವರುಗಳು ಹಾಜರಿರಲಿಲ್ಲ.)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬಿಜಾಪುರ ಜಿಲ್ಲೆಯಲ್ಲಿ ಸರಕಾರಿ ಪದವೀ ಕಾಲೇಜು

೧೫೨೪. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ) —ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಎಷ್ಟು ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರಿ ಪದವೀ ಕಾಲೇಜುಗಳಿವೆ ?

ಆ) ತಾಲ್ಲೂಕು ಕೇಂದ್ರವಾದ ಬಿಜಾಪುರ ಜಿಲ್ಲೆಯ ಬೀಳಗಿಯಲ್ಲಿ ಪದವಿ ಕಾಲೇಜು ಪ್ರಾರಂಭಿಸಲು ಪ್ರಾಸಗಿ ಶಿಕ್ಷಣ ಸಂಸ್ಥೆಯವರು ಯಾರಾದರೂ ಮುಂದೆ ಬಂದಿದ್ದಾರೆಯೇ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಯಾವುದೂ ಇಲ್ಲ

ಆ) ಹೌದು

ಇ) ಆಗ ಕಾಲೇಜಿಗೆ ಮಂಜೂರಾತಿ ನೀಡಲು ಶಿಫಾರಸ್ಸು ಮಾಡಿದ್ದೆವು.